**Com.O.S.** 148/2023
**PW**-1

**ಸಾಕ್ಷಿಯನ್ನು ದಿನಾಂಕ 7.11.2025 ರಂದು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಂದುವರೆದ ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ ಆರ್.ಆರ್ ವಕೀಲರಿಂದಃ**

ಪ್ರತಿವಾದಿಗಳಿಗೆ ಪುಸ್ತಕಗಳನ್ನು ಸರಬರಾಜು ಮಾಡುವ ಕುರಿತು ಲಿಖಿತ ಒಪ್ಪಂದ ಮಾಡಿಕೊಂಡಿಲ್ಲ. ದಿನಾಂಕ 13.6.2019 ರಿಂದ 16.7.2019 ರವರೆಗೆ ಪ್ರತಿವಾದಿಗೆ ಪುಸ್ತಕ ಸರಬರಾಜು ಮಾಡಿದ್ದೇವೆ ಎಂದರೆ ನಿಜ. ಸಾಕ್ಷಿ ಸ್ವತಃ ಹೇಳುತ್ತಾರೆ ಹಿಂದಿನ ವರ್ಷ ಸಹ ಪುಸ್ತಕ ಸರಬರಾಜು ಮಾಡಿರುತ್ತೇವೆ. ಕೊನೆಯ ಬಾರಿಗೆ ದಿನಾಂಕ 16.7.2019 ರಂದು ಪುಸ್ತಕ ಸರಬರಾಜು ಮಾಡಿದ್ದೇವೆ ಎಂದರೆ ನಿಜ. ಆ ಪುಸ್ತಕಗಳ ಹಣಕ್ಕಾಗಿ ಈ ದಾವೆ ಹಾಕಿದ್ದೇವೆ ಎಂದರೆ ನಿಜ. ನಮ್ಮ ಏಜೆನ್ಸಿಯಲ್ಲಿ ರವಿ ಅವರು ಕೆಲಸ ಮಾಡುತ್ತಿರಲಿಲ್ಲ. ಆ ರವಿ ಎಂಬುವವರು ಹೋಲಿ ಪೇತ್ ಪಬ್ಲಿಕೇಶನ್ ನಲ್ಲಿ ಕೆಲಸ ಮಾಡುತ್ತಿದ್ದರು, ಅವರು ನಮ್ಮ ಸಂಬಂಧಿ ಇರುತ್ತಾರೆ. ಅವರು ನಮ್ಮ ಬುಕ್ ಏಜೆನ್ಸಿಯ ವ್ಯವಹಾರ ನೋಡಿಕೊಳ್ಳುತ್ತಿದ್ದರು ಎಂದರೆ ನಿಜ. ರವಿ ಇವರು 2019 ರಲ್ಲಿ ಪ್ರತಿವಾದಿಗಳಿಂದ 2 ಲಕ್ಷವನ್ನು ಆನ್‌ಲೈನ್ ಮೂಲಕ ಪಡೆದಿರುತ್ತಾರೆ ಎಂದರೆ ನಿಜ. ಸಾಕ್ಷಿ ಸ್ವತಃ ಹೇಳುತ್ತಾರೆ ಆ ಹಣವನ್ನು ನನಗೆ ನಗದಾಗಿ ಪಾವತಿ ಮಾಡಿರುತ್ತಾರೆ. ದಿನಾಂಕ 13.6.2019 ಕ್ಕಿಂತ ಮೊದಲು ಆ ಹಣ ಪಾವತಿಸಿದ್ದಾರೆ ಎಂದರೆ ನಿಜ. ಸಾಕ್ಷಿ

ಸ್ವತಃ ಹೇಳುತ್ತಾರೆ ಆ ಹಣ 2018 ರ ವ್ಯವಹಾರಕ್ಕೆ ಸಂಬಂಧಿಸಿದ್ದು ಇದೆ. ವಾದಪತ್ರದಲ್ಲಿ ಆ ಹಣ 2019 ಕ್ಕೆ ಸಂಬಂಧಪಟ್ಟದ್ದು ಎಂದು ಹೇಳಿಲ್ಲ. 2019 ನೇ ವರ್ಷದ ನಮ್ಮ ಸಂಸ್ಥೆಯ ಬ್ಯಾಂಕ್ ಸ್ಟೇಟಮೆಂಟ್ ಮತ್ತು ಸೇಲ್ಸ ರಿಜಿಸ್ಟರನ್ನು ಹಾಜರುಪಡಿಸಲು ತೊಂದರೆ ಇಲ್ಲ. ದಾವೆಯಲ್ಲಿ ಯಾವ ದಿನಾಂಕದಂದು ಎಷ್ಟು ವ್ಯವಹಾರವಾಗಿದೆ ಎಂದು ಹೇಳಿದ್ದೇವೆ. ನೋಟಿಸಿನಲ್ಲಿ ಆ ಬಗ್ಗೆ ಹೇಳಿಲ್ಲ ಎಂದರೆ ನನಗೆ ಗೊತ್ತಿಲ್ಲ. ನೋಟಿಸ್ ನೀಡುವ ಮೊದಲು ಪ್ರತಿವಾದಿಗೆ ಹಣ ನೀಡಿ ಎಂದು ಮೌಖಿಕವಾಗಿ ಕೇಳಿದ್ದೇವೆ, ಆದರೆ ಆ ಬಗ್ಗೆ ದಾಖಲೆ ಇಲ್ಲ. ನೋಟಿಸ್ ನೀಡುವ ಮೊದಲು ಪ್ರತಿವಾದಿ ಕಾಲಾವಕಾಶ ಕೇಳಿದ ಬಗ್ಗೆ ದಾಖಲೆ ಇಲ್ಲ. ಸಾಮಾನ್ಯವಾಗಿ ಪುಸ್ತಕಗಳ ಸರಬರಾಜಿಗೆ ಮೊದಲು ಅಡ್ವಾನ್ಸ ಪಡೆಯುತ್ತೇವೆ ಎಂದರೆ ಸರಿಯಲ್ಲ. ಅಡ್ವಾನ್ಸ ಪಡೆದಿಲ್ಲ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಪ್ರತಿವಾದಿಗಳಿಂದ 2 ಲಕ್ಷವನ್ನು ಅಡ್ವಾನ್ಸ ಎಂದು ಪಡೆದಿದ್ದೇವೆ ಎಂದರೆ ಸರಿಯಲ್ಲ. ಶೇ.25 ಬಡ್ಡಿ ಪಾವತಿಸುವ ಬಗ್ಗೆ ಒಪ್ಪಂದವಾಗಿಲ್ಲ. ಪ್ರತಿವಾದಿಗಳು ಪಾವತಿಸಿದ 2 ಲಕ್ಷವನ್ನು ಕಳೆದು ಉಳಿದ ಹಣವನ್ನು ನಗದಾಗಿ ಪಾವತಿಸಿದ್ದಾರೆ ಎಂದರೆ ಸರಿಯಲ್ಲ. ಎದುರುದಾರರು ಹಣ ಪಾವತಿಸಿದ ಬಗ್ಗೆ ಸ್ವೀಕೃತಿ ನೀಡುವುದಿಲ್ಲ, ಆದರೆ ಸ್ಟೇಟಮೆಂಟಿನಲ್ಲಿ ನಮೂದು ಮಾಡುತ್ತೇವೆ. ಪುಸ್ತಕ ಸರಬರಾಜು ಮಾಡಿದಾಗ ಇನವಾಯ್ಸಿನಲ್ಲಿ ಪ್ರತಿವಾದಿಯರ ಸಹಿ ಪಡೆಯುತ್ತೇವೆ ಎಂದರೆ ನಿಜ. ನ್ಯಾಯಾಲಯದಲ್ಲಿ ಹಾಜರುಪಡಿಸಿರುವ ಇನವಾಯ್ಸಿನಲ್ಲಿ ಸಹಿ ಇಲ್ಲ ಎಂದರೆ ನಿಜ. ಸಾಕ್ಷಿ ಸ್ವತಃ ಹೇಳುತ್ತಾರೆ ಡೆಲಿವರಿ ಚಲನಿನಲ್ಲಿ

ಸಹಿ ಪಡೆದಿದ್ದೇವೆ. ನಿಪಿ6 ರ ಪೈಕಿ 16.7.2019 ರ ಡೆಲಿವರಿ ಚಲನಿಗೆ ಪ್ರತಿವಾದಿಗಳ ಸಹಿ ಮಾತ್ರ ಇದೆ, ಸೀಲ್ ಇಲ್ಲ. ಉಳಿದ ಡೆಲಿವರಿ ಚಲನುಗಳಿಗೆ ಸಹಿ ಮತ್ತು ಸೀಲ್ ಇವೆ. ನಿಪಿ1 ರಲ್ಲಿ ನಮೂದಿರುವಂತೆ ದಿನಾಂಕ 26.7.2019 ರಂದು 1,14,798.24 ರೂ.ಗಳ ಪುಸ್ತಕವನ್ನು ವಾಪಸ್ ಮಾಡಿದ್ದಾರೆ. ವಾಪಸ್ ಆದ ಬಗ್ಗೆ ದಾವೆಯಲ್ಲಿ ಮತ್ತು ನೋಟಿಸಿನಲ್ಲಿ ಹೇಳಿಲ್ಲ. ಕೋವಿಡ್ ಲಾಕ್‌ಡೌನ್ ಕಾರಣಕ್ಕೆ 2 ವರ್ಷ ಶಾಲೆ ತೆರೆದಿಲ್ಲವಾದ್ದರಿಂದ 2 ವರ್ಷಗಳ ನಂತರ ನೋಟಿಸ್ ನೀಡಿರುತ್ತೇವೆ. ದಾವೆಯಲ್ಲಿ ಮತ್ತು ನೋಟಿಸಿನಲ್ಲಿ ಆ ಬಗ್ಗೆ ಹೇಳಿಲ್ಲ ಎಂದರೆ ನನಗೆ ಗೊತ್ತಿಲ್ಲ. ನಮಗೆ ಬರಬೇಕಾದ ಪೂರ್ಣ ಹಣ ಸಂದಾಯವಾಗಿದ್ದರೂ ಸಹ ಪ್ರತಿವಾದಿಗಳ ವಿರುದ್ಧ ದಾವೆ ಹಾಕಿರುತ್ತೇವೆ ಎಂದರೆ ಸರಿಯಲ್ಲ. ನಾವು ಹಾಜರುಪಡಿಸಿರುವ ದಾಖಲೆಗಳನ್ನು ಸೃಷ್ಟಿ ಮಾಡಿರುತ್ತೇವೆ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇ ಎ ಒ.,

2 ನೇ ಅಪರ ಜಿಲ್ಲಾ ಮತ್ತು ಸತ್ತ ನ್ಯಾಯಾಧೀಶರು
ಮೈಸೂರು